ಬಪ್ಪಿಲಹರಿಯದೇ ಎನ್ನುವ ಗಜಲ್ ಒಂದು ಐತ್‌ಬಾರ್ ಚಿತ್ರದಲ್ಲಿದೆ. 'ಕಿಸೀ ನಜರ್ ಕೊ ತೆರಾ ಇಂತಜಾರ್ ಆಜ್ ಭೀ ಹೈ...' ಆಶಾ ಇದಕ್ಕೆ ದನಿ ನೀಡಿದ್ದಾರೆ.

ಇಳಯರಾಜ, ಜೈದೇವ್, ಶಂಕರ್ ಜೈಕಿಶನ್, ಅನ್ನು ಮಲ್ಲಿಕ್, ಮದನ್ ಮೋಹನ್, ಸಂದೀಪ್ ಚೌತಾ, ಲಕ್ಷ್ಮಿಕಾಂತ್ ಪ್ಯಾರೆಲಾಲ್, ನೌಷಾದ್, ರವೀಂದ್ರ ಜೈನ್, ದತ್ತಾ, ಹೇಮಂತ ಕುಮಾರ್, ರೋಷನ್, ಕಲ್ಯಾಣ್ ಜಿ ಆನಂದ್ ಜಿ, ನದೀಮ್ ಶ್ರವಣ್, ಜತಿನ್ ಲಲಿತ್... ಹೀಗೆ ನಂತರದ ದಿನಗಳಲ್ಲಿ ಆಶಾ ದನಿ ಎಲ್ಲರಿಗೂ ಬೇಕಾಯಿತು. ರೆಹಮಾನ್ ನಿರ್ದೇಶನದಲ್ಲಿ ಅವರು ಹದಿವಯಸ್ಸಿನ ಹುಡುಗಿ ಊರ್ಮಿಳಾಗಾಗಿ 'ತನ್‌ಹಾ ತನ್‌ಹಾ' ಹಾಡಿದಾಗ ಅವರಿಗೆ 62 ವರ್ಷಗಳು. ಆಮೆಲೆ ಕರಿಷ್ಮಾ, ಕಾಜೋಲ್ , ಐಶ್ವರ್ಯಾ ಎಲ್ಲರಿಗೂ ಆಶಾ ಹಾಡಿದ್ದಾರೆ. ಆಶಾ ಮ್ಯಾಜಿಕ್‌ನಿಂದ ಯಾರೂ ತಪ್ಪಿಸಿಕೊಳ್ಳಲಾಗಲಿಲ್ಲ.

ಎರಡು ರಾಷ್ಟ್ರಪ್ರಶಸ್ತಿ, 18 ರಾಜ್ಯಪ್ರಶಸ್ತಿ, 9 ಫಿಲಂಫೇರ್ ಪ್ರಶಸ್ತಿ ಜೊತೆಗೆ ಫಿಲಂಫೇರ್ ಜೀವಮಾನ ಸಾಧನೆ ಪ್ರಶಸ್ತಿ, 4 ಬಿಎಫ್‌ಜೆಎ ಪ್ರಶಸ್ತಿ, 2 ಗ್ರ್ಯಾಮಿ ನಾಮನಿರ್ದೇಶನ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಅವರ ಮೈಮೇಲಿನ ವಜ್ರಗಳೊಡನೆ ಮಿಂಚುತ್ತವೆ.

ಕನ್ನಡಕ್ಕಾಗಿ ಅವರು ಮತ್ತೆ ಮುಂಗಾರು, ದೂರದಬೆಟ್ಟ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಚಿತ್ರಗಳಿಗಾಗಿ ಹಾಡಿದ್ದಾರೆ. ಸಂಗೀತದ ದೃಷ್ಟಿಯಿಂದ ಅವುಗಳಲ್ಲಿ ಕುಂದಿಲ್ಲವಾದರೂ ಏಕೋ ಆ ಹಾಡುಗಳು ಎದೆಯನ್ನು ತಾಕುವುದಿಲ್ಲ, ಕನ್ನಡವನ್ನು ಮೈದಳೆದಿಲ್ಲ.



ಆಶಾ ಗಾಯನದ 'ದಿಲ್‌ವಾಲೆ ದುಲ್ಹನಿಯಾ ಲೇ ಜಾಯೇಂಗೆ' ಚಿತ್ರದ ದೃಶ್ಯ



ಊರ್ಮಿಳಾ ಮಾತೊಂಡ್ಕರ್ ತನಹಾ ತನಹಾ ಯಹಾಂಪೆ ಜೀನಾ ಹಾಡಿನಲ್ಲಿ

ಉಳಿಯುತ್ತಾರೆ. ದೂರ ಉಳಿದು ಸ್ನೇಹಿತರಾಗಿರುವಷ್ಟು ಸುಲಭವಲ್ಲ ಒಟ್ಟಾಗಿ ಸಹವಾಸಿಯಾಗಿರುವುದು... ಹಾಗಾಗಿಯೇ 'ಮೇರಾ ಕುಚ್ ಸಾಮಾನ್...'

ಹೀಗೆ ಈ ಮೂರು ಹಾಡುಗಳು ಆಶಾರ ಬದುಕಿನ ಸಾಲುಗಳಾಗಿದ್ದವು. 'ಎಲ್ಲೇ ವೇದಿಕೆಯಲ್ಲಿ ಇವನ್ನು ಹಾಡುವಾಗ ಗಂಟಲು ಕಟ್ಟಿಬರುತ್ತದೆ. ಕೂಡಲೇ ಬೇರೇನನ್ನೋ ಯೋಚಿಸುತ್ತೇನೆ....' ಆಶಾ ನೆನಪುಗಳಲ್ಲಿ ಮುಳುಗಿ ಹೇಳಿದ್ದರು.



ಮೊಮ್ಮಗಳು ಝುನೈ ಭೋಸ್ಲೆ ಅವರೊಂದಿಗೆ ಆಶಾ

ಯಾವುದೇ ಹೊಸತನ್ನು ಪ್ರಯತ್ನಿಸುವುದರಲ್ಲಿ ಅವರು ಎಂದೂ ಎರಡನೆಯ ಯೋಚನೆ ಮಾಡಿದ್ದೇ ಇಲ್ಲ. 2013 ರಲ್ಲಿ ಆಶಾ 'ಮಾಯಿ' ಎನ್ನುವ ಚಿತ್ರದಲ್ಲಿ ತಮ್ಮ 79 ನೆಯ ವಯಸ್ಸಿನಲ್ಲಿ ಆಲ್ಜೈಮರ್ ಕಾಯಿಲೆಯಿಂದ ನರಳುವ ಅಮ್ಮನ ಪಾತ್ರದಲ್ಲಿ ಅಭಿನಯಿಸಿ, ತಮ್ಮ ಅಭಿನಯದ ಮೂಲಕ ದಂಗು ಬಡಿಸಿದ್ದೂ ಹೌದು! 2020ರಲ್ಲಿ ಅವರು ತಮ್ಮ ಹೆಸರಿನ ಯೂಟ್ಯೂಬ್ ಚಾನೆಲ್ ಪ್ರಾರಂಭಿಸಿದ್ದರು. ಮೈಹರ್ ಘರಾನದ ಉಸ್ತಾದ್ ಅಲಿ ಅಕ್ಬರ್ ಖಾನ್ ಜೊತೆಗೆ, ಬ್ರೆಟ್ ಲೀ ಜೊತೆಗೆ, ಸಂಜಯ್ ದತ್ ಜೊತೆಗೆ ಸಹ ಹಾಡಿದ್ದಾರೆ, ದೇಶವಿದೇಶಗಳಲ್ಲಿ ಹಲವಾರು ಮ್ಯೂಸಿಕಲ್ ಟೂರ್‌ಗಳು, ಹೊರತಂದ ಮ್ಯೂಸಿಕ್ ಆಲ್ಬಮ್‌ಗಳು, ಬಾಯ್ ಜಾರ್ಜ್, ಕೋಡ್ ರೆಡ್ ಇತ್ಯಾದಿ ಹಲವಾರು ವಿದೇಶಿ ಬ್ಯಾಂಡ್‌ಗಳೊಂದಿಗೆ ಸಹಯೋಗ, ಅಷ್ಟು ಸಾಲದು ಎನ್ನುವಂತೆ ದುಬೈ, ಬಹರೇನ್, ಮಾಂಚೆಸ್ಟರ್ ಇತ್ಯಾದಿ ಸ್ಥಳಗಳಲ್ಲಿ ಅವರ 'ಆಶಾಸ್' ಎನ್ನುವ ಸರಣಿ ಹೋಟೆಲ್ ಸಾಮ್ರಾಜ್ಯವೇ ಇದೆ. ಇವರು ಮಾಡುವ ಮೀನಡಿಗೆ ಮತ್ತು ಮಟನ್ ಬಿರಿಯಾನಿ ಚಿತ್ರರಂಗದಲ್ಲೇ ಫೇಮಸ್! 90ರ ವಯಸ್ಸಿನಲ್ಲಿ ದುಬೈನಲ್ಲಿ ವೇದಿಕೆ ಕಾರ್ಯಕ್ರಮದಲ್ಲಿ ಜನ ಅವರಿಗೆ ಕೊಟ್ಟ ಸ್ಟ್ಯಾಂಡಿಂಗ್ ಒವೇಶನ್ ಅವರ ದನಿಯಲ್ಲಿನ ಮುಪ್ಪಿಲ್ಲದ ಮಿಂಚಿಗೆ ಸಾಕ್ಷಿ. 2026ರಲ್ಲಿ ಅವರು ಬ್ರಿಟಿಷ್ ವರ್ಚುವಲ್ ಬ್ಯಾಂಡ್ ಗೊರಿಲ್ಲಾಸ್ ಅವರ 'ದಿ ಶಾಡೋಯ್ ಲೈಟ್' ಹಾಡಿಗೆ ಧ್ವನಿ ನೀಡಿದ್ದರು.

ಆಶಾ ಇಡೀ ಬದುಕು ಸವಾಲುಗಳಿಂದಲೇ ತುಂಬಿತ್ತು. 'ಮೈಯ್ಯನು ಹಿಂಡಿ ನೊಂದರು ಕಬ್ಬು ಸಿಹಿಯ ಕೊಡುವುದು, ತೇಯುತಲಿದ್ದರು ಗಂಧದ ಪರಿಮಳ ತುಂಬಿಬರುವುದು..' ಎಂಬಂತೆ ಅವರ ಬಾಳು. ಆತ್ಮಹತ್ಯೆಗೂ ಪ್ರಯತ್ನಿಸಿದ್ದ ಮೊದಲ ಮದುವೆ, ಕೈಗೆ ಸಿಕ್ಕೂ ನಿಲ್ಲದ ಪ್ರೇಮ, ಕಣ್ಣಮುಂದೆ ಮಗ ಮತ್ತು ಮಗಳ ಸಾವು, ಜೀವನದುದ್ದಕ್ಕೂ, ಏನೇ ಮಾಡಿದರೂ ತಪ್ಪದ ಎರಡನೆಯ ಸ್ಥಾನ... ಆಶಾರನ್ನು ಬಗ್ಗು ಬಡೆಯಲು ಏನೆಲ್ಲಾ ಇತ್ತು. ಆದರೆ ಆಶಾ ತಮ್ಮ ಹೆಸರನ್ನು ಬದುಕಿಗಿಳಿಸಿಕೊಂಡರು, ಮುಂದೆ ಹೆಜ್ಜೆಹಾಕುತ್ತಲೇ ಉಳಿದರು. ಕಷ್ಟವನ್ನು ಸುಮ್ಮನೇ ಹೇಳಿಕೊಂಡು ಗೋಳಾಡಬಾರದು, ಹಂಚಬೇಕಿರುವುದು ಖುಷಿಯನ್ನು ಮಾತ್ರ ಎನ್ನುತ್ತಿದ್ದ ಆಶಾ ಪೂರ್ಣ ಕುಸಿದದ್ದು ಮಗಳು ವರ್ಷಾ ಖಿನ್ನತೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಾಗ. ಹಾಡು, ನಗು, ಮಾತು, ಸ್ನೇಹಿತರು ಎಲ್ಲವನ್ನೂ ಬಿಟ್ಟು ನೆಲಕಚ್ಚಿಬಿಟ್ಟಿದ್ದರು. ಆಗ ಅವರನ್ನು ಸಮಾಧಾನಿಸಿದ್ದು ಸಹೋದರ ಹೃದಯನಾಥ್. 'ಕಲಾವಿದರೆಂದರೆ ಶಾಪ ಹೊತ್ತ ಗಂಧರ್ವರು. ದೇವರು ಅವರಿಗೆ ಕಲೆಯನ್ನು ಕೊಟ್ಟು, ಸುಖವನ್ನು ಕಿತ್ತುಕೊಳ್ಳುತ್ತಾನೆ, ಆದರೆ ಆ ಕಲೆಯ ಮೂಲಕವೇ ಅವರು ಕಷ್ಟವನ್ನು ದಾಟಬೇಕು ಎಂದು ಹೇಳಿ, ತಾನ್‌ಪುರಾ ಕೈಗಿಟ್ಟು, ರಿಯಾಜ್‌ಗೆ ಕೂರಿಸುತ್ತಾರೆ. ಹಾಡುತ್ತಾ, ಹಾಡುತ್ತಾ ಆಶಾ ಬದುಕನ್ನು ಎಟುಕಿಸಿಕೊಳ್ಳುತ್ತಾರೆ.

ತಮ್ಮ 92 ನೆಯ ವರ್ಷದಲ್ಲಿ ಆಶಾ ಶಾಡೋಯ್ ಲೈಟ್‌ಗೆ ಹಾಡಿದ ಸಾಲುಗಳು ಹೀಗಿವೆ:

ಚಲ್ ಮೇರೆ ಮಾಝಿ, ಗೆಹರಾ ಹೈ ಪಾನಿ

ಮುಝೆ ಜಾನಾ ಉಸ್ ಪಾರ್

ಹೀಗೆ ನಮ್ಮ ಭಾವಲೋಕಕ್ಕೆ ಹರೆಯವನ್ನುಳಿಸಿ, ಹಾಡುಗಳ ಕಾಲ್ಗಳಿಗೆ ಗಾಜಿನ ಮಣಿಗಳ ಗೆಜ್ಜೆ ಕಟ್ಟಿದ ಈ ಗಂಧರ್ವೆ ಆ ದಡಕ್ಕೆ ಹೊರಟೇಬಿಟ್ಟರು... ಅವರೊಂದು ನಿರಂತರ ಎಚ್ಚರ, ಸೋಲದ ಛಲದ ಪಾಠ. ಬಹುತ್ ಶುಕ್ರಿಯಾ ಬಡೀ ಮೆಹರ್ಬಾನಿ ಹಮಾರೆ ಜಿಂದಗೀ ಮೆ ಹುಜೂರ್ ಆಪ್ ಆಯೆ...

ಪ್ರತಿಕ್ರಿಯಿಸಿ: feedback@sudha.co.in